ಓ. ಎಸ್. ನಂಃ 403/2014
ಡಿ. ಡಬ್ಲ್ಯೂ ಃ 3

ದಿಃ 28.09.2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್ ಎಲ್ ವಕೀಲರಿಂದ**

10. ನಾನು ಹೇಳಿದಂತ ದಿಃ 01.02.1984 ರ ಪಾರಿಕತ್ತನ್ನು ನೋಡಿದ್ದೇನೆ. ಅದನ್ನು ಬರವಣಿಗೆ ಮಾಡಿದವರ ಹೆಸರು ನನಗೆ ಗೊತ್ತಿಲ್ಲ. ಆ ಪಾರಿಕತ್ತಿನಲ್ಲಿ ಎಷ್ಟು ಪುಟಗಳಿವೆ ಎಂದು ಗೊತ್ತಿಲ್ಲ. ಅದರ ಷೆಡ್ಯೂಲ್ ಬಗ್ಗೆ ನಾನು ನೋಡಿಲ್ಲ. ಸದರಿ ಪಾರಿಕತ್ ಸುಮಾರು 15 ಜನರ ನಡುವೆ ಆಗಿದೆ. ಅದಕ್ಕೆ ಯಾರು ಸಾಕ್ಷಿಗಳು ಎಂದರೆ ಸಾಕ್ಷಿ ಗ್ರಾಮಸ್ಥರು ಎಂದು ನುಡಿಯತ್ತಾರೆ . ಅವರು ಹೆಸರುಗಳು ಏನು ಎಂದರೆ ಸಾಕ್ಷಿ ಏನು ಹೇಳದೆ ಸುಮ್ಮನೆ ನಿಂತಿರುತ್ತಾರೆ. ಆ ಪಾರಿಕತ್ ಅನ್ನು ನಾನು ಹಾಜರು ಪಡಿಸಿಲ್ಲ. ಬೇರೆಯವರು ಅದನ್ನು ಹಾಜರು ಪಡಿಸಿರುತ್ತಾರೆ. ಸಾಕ್ಷಿ ಪ್ರತಿವಾದಿಗಳು ಹಾಜರು ಪಡಿಸಿದ ದಾಖಲೆಗಳನ್ನು ನೋಡಿ ಹಾಜರು ಪಡಿಸಿಲ್ಲ ಎಂದು ನುಡಿಯತ್ತಾರೆ.

11. ಜಮೀನು ಖರೀದಿಸುವಾಗ ದಾಖಲೆಗಳ ಜೆರಾಕ್ಸ್ ಪ್ರತಿಯನ್ನು ಸಾಮಾನ್ಯವಾಗಿ ಪಡೆದುಕೊಳ್ಳುವುದು ರೂಢಿ ಎಂದರೆ ಸರಿ. ನಾನು ಆ ಪಾರಿಕತ್ ನ ಜೆರಾಕ್ಸ್ ಅನ್ನು ಪಡೆದಿಲ್ಲ. ಅದನ್ನು ಪಡೆದು ಕೊಳ್ಳಲು ನನಗೆ ತೊಂದರೆ ಇರಲಿಲ್ಲ ಎಂದರೆ ಸರಿ. ನಾನು ಗಂಗಪ್ಪನವರ ವಾರಸುದಾರರು ಪಾರಿಕತ್ ಇದೆ ಎಂದು ಹೇಳಿರುವುದನ್ನು ನೋಡದೆ ಒಪ್ಪಿಕೊಂಡೆ ಎಂದರೆ ಸರಿಯಲ್ಲ. ಪಾರಿಕತ್ ಅನ್ನು ನಾನು ನೋಡಿದ್ದೆ ಹಾಗೂ ಅವರು ಅದನ್ನು ವಾಪಸ್ ತೆಗೆದು ಕೊಂಡು ಹೋದರು. ಈಗ ಅದನ್ನು ಹಾಜರು ಪಡಿಸಲು ನನಗೆ ತೊಂದರೆ ಇಲ್ಲ ಎಂದರೆ ಸರಿ.

12. ನಾನು ದ್ಯಾವಲಿಂಗಯ್ಯ ನವರಿಗೆ ಎಷ್ಟು ಜನ ಮಕ್ಕಳು ಎಂದು ವಿಚಾರಿಸಿದ್ದೆ. ಅವರಿಗೆ ಇಬ್ಬರು ಅಥವಾ ಮೂರು ಜನ ಮಕ್ಕಳು. ಅವರ ಹೆಸರುಗಳು ನನಗೆ ಗೊತ್ತಿಲ್ಲ. ದ್ಯಾವಲಿಂಗಯ್ಯ ರವರ ವಂಶವೃಕ್ಷ ಪಡೆದಿಲ್ಲ. ಪಡೆದುಕೊಳ್ಳಲು ತೊಂದರೆ ಇರಲಿಲ್ಲ. ಈರಯ್ಯ, ಲಿಂಗಯ್ಯ ಹಾಗೂ ಗಂಗಪ್ಪ ಎಂಬ ಮೂರು ಜನ ಮಕ್ಕಳು ಎಂದರೆ ಸರಿ. ಗಂಗಪ್ಪನವರಿಗೆ 1984 ರಲ್ಲಿ ನಾನು ಹೇಳಿದಂತ ಮ್ಯುಟೇಷನ್ ಆಗಿರುವುದು. ಆ ಮ್ಯುಟೇಷನ್ ಪಾರಿಕತ್ ಆದಾರದಲ್ಲಿ ಆಗಿದೆ. ಸದರಿ ಮೂರು ಜನ ಹಾಗೂ ಅವರ ಮಕ್ಕಳ ನಡುವೆ ಯಾವತ್ತು ಪಿರ್ತಾಜಿತ ಆಸ್ತಿಗಳು ವಿಭಾಗ ಆಗಿಲ್ಲ ಎಂದರೆ ಸರಿಯಲ್ಲ.

ಸದರಿ ಲಿಂಗಯ್ಯರವರಿಗೆ ಗೊತ್ತಿಲ್ಲದಂತೆ ಆ ಮ್ಯುಟೇಷನ್ ಮಾಡಿಕೊಂಡಿರುವುದು ಎಂದರೆ ಸರಿಯಲ್ಲ. ಸದರಿ ಲಿಂಗಯ್ಯರವರಿಗೆ ಯಾವ ಆಸ್ತಿಗಳನ್ನು ಭಾಗದಲ್ಲಿ ಕೊಟ್ಟಿದ್ದಾರೆಂದು ನನಗೆ ಗೊತ್ತಿಲ್ಲ.

13. ನಾನು ಇಂಜಿನಿಯರಿಂಗ್ ಪದವೀಧರ. ಕುಟುಂಬದ ವಂಶವೃಕ್ಷ ಹಾಗೂ ಸ್ವತ್ತಿನ ದಾಖಲೆಗಳನ್ನು ಖರೀದಿಗೆ ಮೊದಲು ಪಡೆದುಕೊಳ್ಳುವುದು ನನ್ನ ಜವಬ್ದಾರಿ ಎಂದರೆ ಸರಿ. ಯಾವುದೇ ದಾಖಲೆಗಳನ್ನು ಸರಿಯಾಗಿ ಪರಿಶೀಲಿಸದೆ ದಿಃ **04.05.2007** ರಂದು ತರಾತುರಿಯಲ್ಲಿ ಕ್ರಯ ಪತ್ರ ಬರೆಸಿಕೊಂಡೆ ಎಂದರೆ ಸರಿಯಲ್ಲ. ನನಗೆ ಆ ಕ್ರಯ ಪತ್ರ ಬರೆದು ಕೊಡಲು ಗಂಗಪ್ಪನ ವಂಶಸ್ಥರಿಗೆ ಏಕಸ್ವಾಮ್ಯ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಕ್ರಯ ಆದ ಮೇಲೆ ನೋಡಿಕೊಳ್ಳೋಣ ಎಂದು ಕ್ರಯ ಪತ್ರವನ್ನು ಸೃಷ್ಟಿಸಿಕೊಂಡೆ ಎಂದರೆ ಸರಿಯಲ್ಲ.

ಆ ನಾಲ್ಕು ಜನರ ಮಧ್ಯೆ ವಿಭಾಗ ಆಗಿಲ್ಲ ಎಂದು ನನ್ನ ಗಮನಕ್ಕೆ ಇತ್ತು ಎಂದರೆ ಸರಿಯಲ್ಲ. ಆ ಎಲ್ಲಾ ವಿಚಾರಗಳು ಗೊತ್ತಿದ್ದರೂ ಕೂಡ ಆಸ್ತಿ ಲಪಟಾಯಿಸಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**